ತಪ್ಪಿಸಿ ಅಟ್ಟದ ಬಾಲ್ಕನಿಯಲ್ಲಿ ನಿಂತೆ. ಅವ್ವ ನೆಟ್ಟ ಮಾವಿನ ಮರ ಹೂ ಹೆತ್ತು ಅನಾಥ ನಿಂತಿತ್ತು. ಅಪ್ಪನಿಗೆ ಅನ್ನ ಬೇಯಿಸಿ ಗೊತ್ತಿಲ್ಲ; ಚರಿಗೆಯಿಂದ ಲೋಟ ನೀರು ಎತ್ತಿ ಕುಡಿಯುವ ರೂಢಿಯಿಲ್ಲ. ಅವನ ಪರಾವಲಂಬಿ ಪಾಡು ನೋಡಿ, 'ನನ್ನ ಜತಿ ಉಳಿದುಬಿಡು. ಮನಿ ಬಾಡಿಗಿ ಕೊಡೋಣ' ಎಂದೆ. 'ನೀ ನೌಕರಿ ಮಾಡಾಂವಾ. ನಾಕು ಗೋಡೆ ನಡರ್ಕ ನಾ ಏನ್ ಮಾಡ್ಲಿ? ಇಲ್ಲಿ ಧಾರವಾಡ್ದಾಗ ಎಲ್ಲಿ ಬೇಕಾದ್ರ ಓಡಾಡೋ ಸ್ವಾತಂತ್ರ್ಯ ಐತಿ'ಎಂದು ನಿರಾಕರಿಸಿದ್ದ. 'ಸ್ವಾತಂತ್ರ್ಯ ಅನುಭವಿಸೋದು ಎಷ್ಟು ಕಷ್ಟ ಗೊತ್ತಾಕೈತಿ' ಎಂದಿದ್ದೆ. ಅವನು ಹಾಡು ಕೇಳಿ ದಿನ ದಾಟುತ್ತಿದ್ದ. ಆಕಾಶವಾಣಿಯಲ್ಲಿ ಮುದ್ರಿಸಿದ್ದ ಸಾಕಷ್ಟು ಗಾಯನಗಳನ್ನು ಅವನು ಸಂಗ್ರಹಿಸಿದ್ದ. ಅಂದು ನಾನಿದ್ದ ದಿನಗಳಲ್ಲಿ ಅವನು ಆಸಕ್ತಿಯಿಂದ ಕಲ್ಯಾಣಿಯ ಗಾಯನವನ್ನು ಆಲಿಸುತ್ತಿದ್ದದ್ದನ್ನು ಗಮನಿಸಿದ್ದೆ. ಕಲ್ಯಾಣಿ ಬಂದಳಿಕೆಯಂತೆ ಅಪ್ಪನ ಸುತ್ತಿ ಅವ್ವಳಿಗೆ ಸಲ್ಲಬೇಕಿದ್ದ ಪ್ರೀತಿಯನ್ನು ಹೀರಿದಳೆ? ಈ ಹೋಲಿಕೆ ತಪ್ಪೆನಿಸಿತು. ಎಲ್ಲರ ಮೈ ಕೊಳಕು ತೊಳೆದ ಬಚ್ಚಲ ಪರಿಮಳದ ಸಬಕಾರದಂತೆ ಅವ್ವ ಜೀವ ಸವೆದು ಕರಗಿ ಹೋದಳು. ಮದುವೆ ಉಡುಗರೆಯ ವಾಚನ್ನು ಅವ್ವ ಜೋಪಾನ ಇಟ್ಟಿದ್ದಳು. ಒಮ್ಮೆ ನನಗೆ ತೋರಿಸಿದ್ದಳು. ಹೊರಗೆ ಹೋಗುವಾಗ ಮರೆಯದೆ ವಾಚ್ ಕಟ್ಟುತ್ತಿದ್ದಳು. ನಾನು ಜರ್ಮನಿಗೆ ಹೊರಟ ವರ್ಷ ವಾಚ್ ಕಟ್ಟುವುದನ್ನು ಹಠಾತ್ ನಿಲ್ಲಿಸಿಬಿಟ್ಟಳು. ಏಕೆಂದು ಈಗ ಅರ್ಥವಾಗ್ತಿದೆ. ನನ್ನ ಗ್ರಹಿಕೆ ಪೂರ್ಣ ಸತ್ಯವಾಗಿ ಇರದಿರಬಹುದು. ಕಲ್ಯಾಣಿ ಸತ್ತ ಸುದ್ದಿಯನ್ನು ಅಪ್ಪ ನಂಬಲಿಲ್ಲ. ಕ್ಲಿಯೊ ಅವಳ ಪುನರ್ಜನ್ಮ ಎಂದು ಭಾವಿಸಿದನೆ? ಅವ್ವ ಬದುಕಿರವವರೆಗೆ ಕಲ್ಯಾಣಿಯನ್ನು ಅವಳ ತದ್ರೂಪ ಆವೃತ್ತಿ ಎಂದು ತಿಳಿದು ಸಂಸಾರ ಸಾಗಿಸಿರಬಹುದೇ? ದಾಹವಾಯಿತು. ಡೈನಿಂಗ್ ಹಾಲಿಗೆ ಬಂದ. ಗ್ಲಾಸ್ ನೀರು ಕುಡಿದು ಆಲಿಸಿದ. ರಾವ್ ರೂಮಿನಿಂದ ಕ್ಲಿಯೊ ಹಾಡುತ್ತಿರುವುದು ಕೇಳಿತು. ದೀಪ ಆರಿಸಿ ಮಲಗಿದ.

ಬೆಳಗಿನ ಐದಕ್ಕೆ ಬೆಳಕು ಹರಿಯಿತು. ಕಡು ನೀಲ ಆಹ್ಲಾದಕರ ಆಕಾಶ. ಸ್ತಬ್ಧಚಿತ್ರದಂತೆ ಬೆಳದಿಂಗಳ ಮಿಂದು ನಿಂತ ಮರಗಳು. ರಾವ್ ಎಂದಿಗಿಂತ ಹೆಚ್ಚು ಲವಲವಿಕೆಯಿಂದಿದ್ದರು. ಕಿಟಕಿ ತೆರೆದರು. ಚಳಿ ಜೋರಿತ್ತು. ಶುಚಿಯಾಗಿ ಕುರ್ಚಿಯ ಬೆನ್ನಿಗೇರಿಸಿದ್ದ ದಪ್ಪ ಸ್ವೆಟರ್ ಧರಿಸಿದರು. ತಲೆ ಮತ್ತು ಕುತ್ತಿಗೆಯನ್ನು ಹುಡ್‌ನಿಂದ ಮುಚ್ಚಿದರು. ಗ್ರಾಸ್‌ಲ್ಯಾಂಡ್ ಪಕ್ಕದ ರಸ್ತೆಗುಂಟ ಒಂದು ಸುತ್ತು ಪ್ರದಕ್ಷಣೆ ಹಾಕಿ ಬಂದರು.

ರಾವ್ ಒಳಗೆ ಬಂದು ಶೂ ತೊಡಲು ಮತ್ತು ಕಳಚಲೆಂದೇ ಇಟ್ಟ ಮರದ ಸ್ಟೂಲಲ್ಲಿ ಕುಳಿತು ಲೇಸ್ ಬಿಚ್ಚುತ್ತಿದ್ದಾಗ ಸುಬ್ರೊ ಆರ್ಭಟ ನಗುವಿನಲ್ಲಿ ತೇಲಿದ. 'ಏನಾತೊ?' ರಾವ್ ತಬ್ಬಿಬ್ಬಾದರು. 'ಅಪ್ಪಾ ನನ್ನ ಸ್ವೆಟರ್, ಪ್ಯಾಂಟ್ ಹಾಕ್ಕೊಂಡಿದ್ದಿ ನೀನು!' ಅವರಿಗೂ ನಗು ತಡೆಯಲಾಗಲಿಲ್ಲ. 'ನಾನು ವಾಕ್ ಹೋದಾಗ ಯಾರೊ 'ಹಲೊ ಸುಬ್ರೊ' ಅಂದ್ರು. ಈಗ ಗೊತ್ತಾತು ಯಾಕಂತ. ಅಲ್ಲೊ ನೀ ಏನ್ ಮಾಡಿದ್ದಿ ನೋಡು' ಎಂದರು. ಸುಬ್ರೊ ಬೀರುವಿನ ನಿಲುಗನ್ನಡಿ ಎದುರು ನಿಂತ. ಅಪ್ಪನ ದಿರಿಸು ತೊಟ್ಟ ಬಿಂಬ ಅಣುಕಿಸುವಂತೆ ನಕ್ಕಿತು. 'ಅಪ್ಪಾ ಮಗಾ ಅದಲು ಬದಲು ಆದ್ರು ಬಿಡು!' ಎಂದ. ಇದು ಆಕಸ್ಮಿಕವಾಗಿ ಸಂಭವಿಸಿದ ಕೇವಲ ವೇಷಾಂತರವಲ್ಲ ಎನಿಸಿತು. ಹೆಂಡತಿ ಸನಿಹ ಬರುತ್ತ ಕಲ್ಯಾಣಿಯ ಮುಖ ಪಡೆದ ವಿಚಿತ್ರ ಕನಸನ್ನು ರಾವ್ ನೆನಪಿಸಿಕೊಂಡರು. ಹೊತ್ತ ಹೊರೆ ಇಳಿಸಿದ ಹಗುರತನದಲ್ಲಿ ಇಬ್ಬರೂ ಗೆಲುವಾದರು.

ರೆಸ್ಟೊರೆಂಟಿಂದ ಪಾರ್ಸಲ್ ತಂದಿದ್ದ ಚಪಾತಿ ಮತ್ತು ಪನ್ನೀರ್ ಪಲ್ಯ ಇಬ್ಬರೂ ತಿಂದರು. ಸುಬ್ರೊ ಕಾಫಿ ಕುದಿಸುತ್ತ, 'ಅಪ್ಪಾ ಒಂಟಿ ಜೀವನಾ ಬಾಳ ಬೇಸರ ಅನಸ್ತದಲಾ?' ಎಂದ. ರಾವ್ ಕ್ಷಣಹೊತ್ತು ಉತ್ತರಿಸಲಿಲ್ಲ. ನೊರೆಭರಿತ ಹಬೆಯಾಡುತ್ತಿದ್ದ ಕಾಫಿ ಹೀರುತ್ತಾ ರಾವ್, 'ನಾವು ಏಕಾಂತದಾಗ ಒಂಟಿಯಾಗಿರ್ತೀವಿ ಅಂದ್ಕೊಂಡಿಯೇನು. ಮಗ್ಗಲ್ದಾಗ ಯಾರಾದ್ರಾ ಇದ್ದೇ ಇರ್ತಾರ. ನಮಗ ಬೇಕಿದ್ದವ್ರು ಇದ್ರ ಒಂಟಿತನ ಬ್ಯಾಸರಾ ಅನ್ಸೋದಿಲ್ಲಾ. ಒಮ್ಮೊಮ್ಮಿ ಬೇಕಿದ್ದವ್ರು ಇಣುಕೋದು ಬ್ಯಾಡ ಅನಸ್ತದಪ್ಪ. ಯಾಕ ಹಾಂಗ ಅಂತ ನನಗೆ ತಿಳಿವಲ್ದು' ರಾವ್ ದನಿ ಗಂಭೀರವಾಯಿತು. 'ಕಿಂಡರ್‌ಗಾರ್ಟನ್ ಹೋಗೋದು ಮರ್ತೆ ಬಿಟ್ಟೆ ಮತ್ತ' ಎನ್ನುತ್ತ ಸುಬ್ರೊ ಕಾರ್ ಕದ ಮುಚ್ಚಿದ.

ರಾವ್ ಶಾಲೆ ನೋಡುತ್ತಾ ಬಾಲ್ಕನಿಯಲ್ಲಿ ಕುಳಿತರು. ಗೊಂಬೆಯಂತ ಮಕ್ಕಳು ಮತ್ತು ಅವರ ದಢೂತಿ ಮೆಂಟರ್ ಹಾಜರಾದರು. ಮಕ್ಕಳು